## ವಾರ್ತಾ ನಿಧಿ

ಸಂಘದ ಸದಸ್ಯರ ನಡುವೆ ಮುಖ್ಯಸಂಪರ್ಕ ಸೇತುವೆಯಾಗಿರುವ ಸಂಘದ ಚಟುವಟಿಕೆಗಳ ಮುಖವಾಣಿಯಾಗಿರುವ ಬಾಂಧವರ ಪ್ರತಿಭೆಗಳಿಗೆ ಒಂದು ಕನ್ನಡಿಯಂತಿರುವ ನಿಮ್ಮ 'ಸಂಕೇತಿ ವಾರ್ತಾ'ವನ್ನು ಸದೃಢಗೊಳಿಸಿ, ಗಟ್ಟಿಯಾಗಿ ತನ್ನ ಕಾಲಮೇಲೆ ನಿಲ್ಲುವಂತೆ ಮಾಡುವ ಹೊಣೆ ನಮ್ಮ-ನಿಮ್ಮೆಲ್ಲರ ಮೇಲಿದೆ. ಈ ನಿಟ್ಟಿನಲ್ಲಿ ಬಾಂಧವರಿಂದ ಉದಾರ ಕೊಡುಗೆಗಳನ್ನು ನಿರೀಕ್ಷಿಸಲಾಗಿದೆ. ಮಾನ್ಯ ಬಾಂಧವರು ತಮ್ಮ ಉದಾರ ಮನಸ್ಸಿನ ಕೊಡುಗೆಗಳನ್ನು ಅಧಿಕ ಸಂಖ್ಯೆಯಲ್ಲಿ ನೀಡಿ ಈ ಔಚಿತ್ಯಪೂರ್ಣ ಕಾರ್ಯದಲ್ಲಿ ಭಾಗಿಗಳಾಗಬೇಕೆಂದು ಕೋರುತ್ತೇವೆ. ಎರಡು ಪ್ರಕಾರದ ದಾನಿಗಳನ್ನು ಗುರುತಿಸಲಾಗುವುದು.

**ರೂ. 5,000/- ಕೊಡುಗೆ ನೀಡುವವರು**
**ಮಹಾಪೋಷಕರು**

**ರೂ. 1,000/- ಕೊಡುಗೆ ನೀಡುವವರು**
**ಪೋಷಕರು**

ದಾನಿಗಳ ಹೆಸರುಗಳನ್ನು ಪ್ರತಿ ತಿಂಗಳೂ 'ವಾರ್ತಾ'ದಲ್ಲಿ ಪ್ರಕಟಿಸಲಾಗುವುದು.

# ಸಂಕೇತಿ ವಾರ್ತಾ

ಬೆಟ್ಟದಪುರ ಸಂಕೇತಿ ಸಂಘದ ಮಾಸಪತ್ರಿಕೆ

ಶ್ರೀ ಸರ್ವಧಾರಿ ಸಂ|| ವೈಶಾಖ ಮಾಸ ಸಂಪುಟ - ೨೩

ಮೇ ೨೦೦೮ ಸಂಚಿಕೆ - ೦೫

# Jokes to joy

Life can be a process of growing or aging. Growing involves adding life to one's years and aging involves adding years to one's life. Life is fulfilling only if it is a process of growing.

Growing up in life involves adding maturity and joy to every moment in life. Without contributing to the poetry of life, nobody can be happy. To be creative is a basic need for everyone.

Hence, allow this force to emerge. My suggestion is, at least, start being creative by cracking jokes. Laughter creates a deep silence and in that silence, problems and worries dissolve. Jokes work very interestingly ..., you are saying something and there is an unexpected twist in your presentation. And that creates a surprise, a new joyous feel. The art of cracking a joke is a creative art.

Reflect on this example.

A seven-feet tall man was about to get married. His married friends gave him a piece of advice. They said, "Right from the first day of marriage be strict with your wife or else she will be your master." Following the advice of his friends, on the very first night he commanded his wife "Do you know who I am? I am a wrestler, my father was a wrestler. Tomorrow, I expect hot water for my bath

at 3 am or else.....” The wife was scared. She got up at 2.30 am and heated water for her husband.

This went on every day for ten years. Before retiring to bed he repeated “Hot water for bath... at 3 am or else.....”The wife got fed up and one night when he repeated the same phrase she said, “Okay. Or else what will you do?” “Or else... I will take cold water bath,” said the husband.

When one develops a humourous attitude to life, one’s childlike nature emerges. There is a child in us which wants to be free. As we grow older the child in us is suppressed and, hence, our playfulness also gets suppressed.

Joy of life disappears when we lose ourselves in seriousness.

One of the greatest secrets of life is that we are all born rich but become beggars. We don’t search within ourselves for the treasures we hold within. We don’t know ourselves. Socrates said: “Know thyself”.

The Vedas say “Know thyself”.

Knowing ourselves is just not seeing ourselves as physical embodiments. The body is the peripheral - “Me.” But the “I” that is “self” is not the peripheral “Me”. The deeper “Me” is the soul, which is beyond the body and mind. This can be discovered through understanding, reflection and meditation.

– ಸಂಗ್ರಹ







# ಅಧ್ಯಕ್ಷ ನುಡಿ

ನಮ್ಮ - ನಿಮ್ಮ ‘ವಾರ್ತಾ’ ಆತ್ಮೀಯ ಸಂವಾದಕ್ಕೆ ಅವಕಾಶ ಕಲ್ಪಿಸಿರುವ ವಾಹಿನಿಯಾಗಿರುವುದರ ಜತೆಗೆ ಸಂಘದ ಏಳಿಗೆಗೆ ಅನುಕೂಲವನ್ನು ಒದಗಿಸುತ್ತಿದೆ. ಬಾಂಧವರು ಆಸಕ್ತಿಯಿಂದ ‘ವಾರ್ತಾ’ವನ್ನು ಓದುವುದರ ಜತೆಯಲ್ಲಿಯೇ ನಾವು ಅರಿಕೆ ಮಾಡಿಕೊಳ್ಳುವುದನ್ನು ಗಂಭೀರವಾಗಿ ಪರಿಗಣಿಸುತ್ತಾರೆ ಎಂಬುದಕ್ಕೆ ಉದಾಹರಣೆ ಇದು. ಆತ್ಮೀಯ ಬಾಂಧವರೂ ಚಿಂತಕರೂ ಆದ ಶ್ರೀ ಆರ್. ಕೆ. ಶ್ರೀನಿವಾಸ ಮೂರ್ತಿಯವರು ವೃದ್ಧಾಶ್ರಮದ ಕೊಡುಗೆಗಾಗಿ ನಾವು ಹಿಂದೆ ಮನವಿ ಮಾಡಿದ್ದನ್ನು ನೋಡಿ ರೂ. 10,000/- ಮೊತ್ತದ ಉದಾರ ಕೊಡುಗೆ ನೀಡಿದ್ದಾರೆ. ಶ್ರೀಯುತರ ಈ ಹಿರಿತನಕ್ಕೆ ಅವರಿಗೆ ಮನಃಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇವೆ. ಈ ಸಂದರ್ಭದಲ್ಲಿಯೇ ವೃದ್ಧಾಶ್ರಮದ ನಿರ್ವಹಣೆಗಾಗಿ ಸೂಕ್ತ ಮೇಲ್ವಿಚಾರಕರನ್ನು ನೇಮಿಸುವ ಬಗ್ಗೆ ಮಾನ್ಯ ಬಾಂಧವರ ಸಹಾಯ - ಸಲಹೆಗಳನ್ನು ಕೇಳಲಾಗಿತ್ತೆಂಬುದನ್ನು ನೆನಪಿಸುತ್ತಿದ್ದೇವೆ. ಬಾಂಧವರು ವೃದ್ಧಾಶ್ರಮದ ನಿರ್ಮಾಣಕ್ಕೆ ಸಹಾಯ ನೀಡುತ್ತಲೇ ಮೇಲ್ವಿಚಾರಕರ ವಿಷಯದಲ್ಲಿಯೂ ಸಂಘಕ್ಕೆ ನೆರವಾಗಬೇಕೆಂದು ಕೋರಿಕೆ.

ಏಪ್ರಿಲ್ - ಮೇ ಎಂದರೆ ಪರೀಕ್ಷೆಗಳ ಫಲಿತಾಂಶ

ಎಂದಲ್ಲವೆ? ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಫಲಿತಾಂಶಗಳು ಹೊರಬಿದ್ದಿದ್ದು ನಮ್ಮ ಅನೇಕ ಪ್ರತಿಭಾವಂತ ಯುವ ಬಾಂಧವರು ಯಶಸ್ವಿಯಾಗಿದ್ದಾರೆ. ಹೆಚ್ಚಿನ ಅಂಕಗಳನ್ನು ಪಡೆದು ಜಯಶಾಲಿಯಾದ ಯುವ ಸಂಕೇತಿಗಳು ಭಾವಚಿತ್ರ ಹಾಗೂ ದೃಢೀಕರಿಸಿದ ಅಂಕಪಟ್ಟಿಯ ಪ್ರತಿಗಳನ್ನು ಸಂಘಕ್ಕೆ ಆದಷ್ಟು ಬೇಗ ಕಳುಹಿಸಿ. 'ವಾರ್ತಾ'ದಲ್ಲಿ ಪ್ರಕಟಿಸಲು ಅನುಕೂಲವಾಗುತ್ತದೆ.

ಶುಭಸಮಾಚಾರಗಳು ನಡೆದಾಗ ಸಂಘದ ಮೇಲಿನ ಅಭಿಮಾನದಿಂದ ಬಾಂಧವರು ಸಂಘಕ್ಕೂ ಸಭಾತಾಂಬೂಲವನ್ನು ಕಳುಹಿಸುವುದು ಒಂದು ಸತ್ಸಂಪ್ರದಾಯ. ಕೆಲವರು ವಿಶೇಷ ಮಮತೆಯಿಂದ ಹೆಚ್ಚಿನ ಮೊತ್ತದ ಸಭಾತಾಂಬೂಲವನ್ನು ಸಂಘಕ್ಕೆ ನೀಡಿರುತ್ತಾರೆ. ಅಂತಹವರಲ್ಲಿ ಶ್ರೀ ಬಿ. ಆರ್. ರಮೇಶ್ ಒಬ್ಬರು. ಅವರ ನೂತನ ಮನೆಯ 'ಗೃಹಪ್ರವೇಶ'ದ ಸಂದರ್ಭದಲ್ಲಿ ಸಂಘಕ್ಕಾಗಿ ರೂ. 2000/-ವನ್ನು ಸಭಾತಾಂಬೂಲವಾಗಿ ನೀಡಿದ್ದಾರೆ. ಶ್ರೀಯುತರ ಔದಾರ್ಯಕ್ಕೆ ಅನಂತ ವಂದನೆಗಳು.

ನಿಮ್ಮೆಲ್ಲರ ಅಭಿಮಾನ, ಆತ್ಮೀಯ ಕೊಡುಗೆಗಳೇ ಸಂಘಕ್ಕೆ ಶ್ರೀರಕ್ಷೆ.

– ಎಂ. ನರಸಿಂಹನ್







# ಕಾರ್ಯದರ್ಶಿ ಕಾಲಂ

ಎಲ್ಲಾ ಸಂಕೇತಿ ಬಂಧುಗಳಿಗೂ ನಮಸ್ಕಾರಗಳು. ಪ್ರಾರಂಭದಲ್ಲೇ ಒಂದು ಸಂತೋಷದ ವಿಷಯವನ್ನು ನಿಮ್ಮೆಲ್ಲರ ಜತೆ ಹಂಚಿಕೊಳ್ಳಬಯಸುತ್ತೇನೆ.

ನಮ್ಮ ಪ್ರಸಿದ್ಧ ಸಂಗೀತ ವಿದ್ವಾಂಸರುಗಳಾದ ಶ್ರೀ ಆರ್. ಕೆ. ಪದ್ಮನಾಭ (ಗಾಯನ) ಮತ್ತು ಶ್ರೀ ಬಿ. ಜಿ. ಶ್ರೀನಿವಾಸ್ (ಕೊಳಲು) ಮತ್ತು ಶ್ರೀ ಮತ್ತೂರು ಕೃಷ್ಣಮೂರ್ತಿ ಅವರಿಗೂ ''ಆರ್ಯಭಟ'' ಪ್ರಶಸ್ತಿ ಬಂದಿರುವುದು ಮತ್ತು ಶ್ರೀ ಬಿ. ಜಿ. ಶ್ರೀನಿವಾಸರವರಿಗೆ ಚಾಮರಾಜಪೇಟೆಯ ಶ್ರೀರಾಮ ಸೇವಾ ಮಂಡಳಿಯ ಸಂಸ್ಥಾಪಕ ದಿನಾಚರಣೆ ಅಂಗವಾಗಿ ಸನ್ಮಾನ (ಹೆಸರಾಂತ ಚಿತ್ರನಟ ಶ್ರೀ ಶಿವರಾಂ ಅವರ ನಿರೂಪಣೆಯಲ್ಲಿ) ನಡೆದಿರುವುದು ನಮಗೆಲ್ಲರಿಗೂ ಅತ್ಯಂತ ಹೆಮ್ಮೆ ಮತ್ತು ಸಂತೋಷದ ವಿಷಯ. ಈ ಎಲ್ಲಾ ವಿದ್ವಾಂಸರಿಗೂ ದೇವರು ಇನ್ನೂ ಹೆಚ್ಚಿನ ಯಶಸ್ಸು, ಕೀರ್ತಿ ಮತ್ತು ಆಯುರಾರೋಗ್ಯಾದಿ ಐಶ್ವರ್ಯಗಳನ್ನು ನೀಡಲಿ ಎಂದು ಪ್ರಾರ್ಥಿಸೋಣ.

ನಮ್ಮ ಕಲ್ಯಾಣಮಂಟಪದ ಉಸ್ತುವಾರಿ ನಡೆಸುತ್ತಿದ್ದ ಶ್ರೀ ರವೀಂದ್ರ ಕಣಗಾಲರವರು, ವೈಯ್ಯಕ್ತಿಕ ಕಾರಣಗಳಿಂದ ಸ್ವಯಂ ನಿವೃತ್ತರಾಗಿರುತ್ತಾರೆ. ಹೀಗಾಗಿ ಅಲ್ಲಿನ ವ್ಯವಸ್ಥಾಪಕರ ಸ್ಥಳ ಈಗ ಖಾಲಿಯಾಗಿರುತ್ತದೆ. ಯಾರಾದರೂ ಮುಕ್ತ ಅಭ್ಯರ್ಥಿಗಳಿದ್ದರೆ ದಯವಿಟ್ಟು ಒಂದು ಅರ್ಜಿಯನ್ನು ಬೆಂಗಳೂರಿನ ವಿಳಾಸಕ್ಕೆ ಕಳುಹಿಸಬೇಕಾಗಿ ಪ್ರಾರ್ಥನೆ.

– ಎಸ್. ಸಿ. ಮಂಜುನಾಥ್

# ಶುಭ ಸಮಾಚಾರಗಳು

## ಗೃಹಪ್ರವೇಶ :

| ತಾರೀಖು | ಹೆಸರು |
|---|---|
| 10.04.08 ಬೆಂಗಳೂರು | **ಶ್ರೀಮತಿ ದಿವ್ಯಾ** (ಶ್ರೀಮತಿ ಸುಶೀಲಾ ಶ್ರೀನಿವಾಸ್ ಅವರ ಪುತ್ರಿ) **ಮತ್ತು ಶ್ರೀ ಹೆಚ್. ಎಂ. ಅವಿನಾಶ್** (ಶ್ರೀಮತಿ ರತ್ನಾ ಮತ್ತು ಶ್ರೀ ಮಲ್ಲಿಕಾರ್ಜುನ ಹೆಚ್. ವಿ. ಅವರ ಪುತ್ರ) ಭುವನೇಶ್ವರಿನಗರ |
| 12.04.08 ಬೆಂಗಳೂರು | **ಶ್ರೀಮತಿ ಲೀಲಾ ಶ್ರೀಕಂಠಯ್ಯ** ಜಯನಗರ 5ನೇ ಬ್ಲಾಕ್ |
| 23.04.08 ಮೈಸೂರು | **ಶ್ರೀಮತಿ ಉಷಾ ಮತ್ತು ಶ್ರೀ ಹೆಚ್. ಎಸ್. ಗುರುನಾಥ್** |
| 27.04.08 ಬೆಂಗಳೂರು | **ಶ್ರೀಮತಿ ಪ್ರೇಮಾ ಮತ್ತು ಶ್ರೀ ಹೆಚ್. ಎಸ್. ವೆಂಕಟರಾಮ್** ಸರ್. ಎಂ. ವಿಶ್ವೇಶ್ವರಯ್ಯ ಬಡಾವಣೆ |
| 01.05.08 ಬೆಂಗಳೂರು | **ಶ್ರೀಮತಿ ಉಷಾ** (ಶ್ರೀಮತಿ ದಾಕ್ಷಾಯಿಣಿ ಮತ್ತು ದಿ|| ಬಿ. ಎಸ್. ಕೃಷ್ಣಮೂರ್ತಿ (ಮಂಡ್ಯ) ಅವರ ಪುತ್ರಿ)**ಮತ್ತು ಶ್ರೀ ಬಿ.ಆರ್.ರಮೇಶ್** (ಶ್ರೀಮತಿ ಲಲಿತಾ ಮತ್ತು ದಿ|| ಬಿ. ಎನ್. ರಾಮಚಂದ್ರ ಅವರ ಪುತ್ರ) ಬಿ.ಟಿ.ಎಂ. ಲೇಔಟ್ |

## ಉಪನಯನ :

| ತಾರೀಖು | ವಟು |
|---|---|
| 03.04.08 ಬೆಂಗಳೂರು | **ಚಿ|| ರಾ|| ಆರ್. ಎನ್. ಶಶಿಕುಮಾರ್** (ಶ್ರೀಮತಿ ಅನಿತಾ ಮತ್ತು ಶ್ರೀ ನವೀನ್ ಅವರ ಪುತ್ರ ಹಾಗೂ ದಿ|| ಆರ್.ಜಿ. ಶ್ರೀನಿವಾಸಯ್ಯನವರ ಮೊಮ್ಮಗ) |
| 10.04.08 ಕಣಗಾಲ್ | **ಚಿ|| ಸುಬ್ರಹ್ಮಣ್ಯ** (ಶ್ರೀಮತಿ ಗಾಯಿತ್ರಿ ಮತ್ತು ಶ್ರೀ ಕೆ. ಎನ್. ಕೇಶವಮೂರ್ತಿ ಅವರ ಪುತ್ರ) |





| ತಾರೀಖು | ವಟು |
|---|---|
| 27.04.08 ಮೈಸೂರು | **ಚಿ|| ಹೆಚ್. ಎ. ಅಭಿಷೇಕ್** (ಶ್ರೀಮತಿ ಆಶಾ ಮತ್ತು ಶ್ರೀ ಹೆಚ್. ಎಸ್. ಅನಂತಪದ್ಮನಾಭ ಅವರ ಪುತ್ರ) |
| 27.04.08 ಮೈಸೂರು | **ಚಿ|| ಬಿ. ಆರ್. ವಿನಯ್ ಕೌಶಿಕ್** (ಶ್ರೀಮತಿ ಜಯಶ್ರೀ ಮತ್ತು ಶ್ರೀ ಬಿ. ಕೆ. ರಂಗನಾಥ್ ಅವರ ಪುತ್ರ ಹಾಗೂ ದಿ|| ಬಿ. ಎಸ್. ಕೃಷ್ಣಪ್ಪನವರ ಮೊಮ್ಮಗ) |
| 30.04.08 ಬೆಂಗಳೂರು | **ಚಿ|| ಕಾರ್ತಿಕ್** (ಶ್ರೀಮತಿ ಸವಿತಾ ಮತ್ತು ಶ್ರೀ ಬಿ. ಎಸ್. ರವಿಶಂಕರ್ (ಮುಂಬಯಿ) ಅವರ ಪುತ್ರ ಹಾಗೂ ಶ್ರೀಮತಿ ಸರಳಾ ಮತ್ತು ಶ್ರೀ ಬಿ.ಎಸ್. ಸದಾಶಿವ ಮತ್ತು ಶ್ರೀಮತಿ ಉಮಾ ಮತ್ತು ಶ್ರೀ ಆರ್. ಶ್ರೀನಿವಾಸನ್ ಅವರ ಮೊಮ್ಮಗ ಹಾಗೂ ಶ್ರೀಮತಿ ರಾಜಮ್ಮ ರಂಗಸ್ವಾಮಿ ಅವರ ಪ್ರಪೌತ್ರ) |

## ವಿವಾಹ ಮಹೋತ್ಸವ :

| ತಾರೀಖು | ವಧು | ವರ |
|---|---|---|
| 11.04.08 ಚೆನ್ನೈ | **ಹ||ಕುಂ||ಶೋ|| ಆರ್. ಸವಿತಾ** (ಶ್ರೀಮತಿ ಭಾಗ್ಯಲಕ್ಷ್ಮೀ ಮತ್ತು ಶ್ರೀ ಆರ್. ರಾಮಚಂದ್ರನ್ ಅವರ ಪುತ್ರಿ) | **ಚಿ|| ರಾ|| ಮಹೇಶ್** (ಶ್ರೀಮತಿ ಪಾರ್ವತಿ ಮತ್ತು ಶ್ರೀ ಪಿ. ರಾಮಚಂದ್ರನ್ ಅವರ ಪುತ್ರ) |
| 18.04.08 ಬೆಂಗಳೂರು | **ಹ||ಕುಂ||ಶೋ|| ಮೇದಿನಿಕಾಶ್ಯಪ್. ಎಸ್** (ಶ್ರೀಮತಿ ರಮಾದೇವಿ ಮತ್ತು ಶ್ರೀ ಆರ್.ಎಸ್.ಸುರೇಶ್‌ಕುಮಾರ್ ಅವರ ಪುತ್ರಿ ಹಾಗೂ ಶ್ರೀ ಬಿ.ಆರ್. ಸುಬ್ಬರಾವ್ ಅವರ ಮೊಮ್ಮಗಳು) | **ಚಿ||ರಾ|| ವಿನಯದತ್ತ. ಎಸ್** (ಶ್ರೀಮತಿ ರಮಾಮಣಿ ಮತ್ತು ಶ್ರೀ ಕೆ. ಶಿವಪ್ರಸಾದ್ ಅವರ ಪುತ್ರ) |
| 27.04.08 ಕಾನ್ಪುರ್ | **ಹ||ಕುಂ||ಶೋ|| ಸೌಮ್ಯಕೇಶವಮೂರ್ತಿ** (ಶ್ರೀಮತಿ ಸುಶೀಲ ಮತ್ತು ಶ್ರೀ ಎಸ್. ವಿ. ಕೇಶವಮೂರ್ತಿ ಅವರ ಪುತ್ರಿ) | **ಚಿ||ರಾ||ಡಾ||ಅನುರಾಗ್ ಕೆ. ಶ್ರೀವಾಸ್ತವ** (ದಿ|| ಕಮಲ ಮತ್ತು ದಿ|| ಸುರೇಶ್‌ಚಂದ್ರ ಸಿನ್ಹಾ ಅವರ ಪುತ್ರ) |

| ತಾರೀಖು | ವಧು | ವರ |
|---|---|---|
| 28.04.08 ಬೆಂಗಳೂರು | **ಹ||ಕುಂ||ಶೋ|| ಅರ್ಚನಾ** (ಶ್ರೀಮತಿ ರಾಧಾಮಣಿ ಮತ್ತು ಶ್ರೀ ಪಿ. ಕೆ. ಸುಬ್ರಹ್ಮಣ್ಯ ಅವರ ಪುತ್ರಿ) | **ಚಿ|| ರಾ|| ಶರಣ್** (ಶ್ರೀಮತಿ ವತ್ಸಲಾ ಮತ್ತು ಶ್ರೀ ನರಸಿಂಹ ಶರ್ಮಾ (ಬಾಂಬೆ) ಅವರ ಪುತ್ರ ಹಾಗೂ ಶ್ರೀಮತಿ ಸುಬ್ಬಮ್ಮ ಮತ್ತು ದಿ|| ಬಿ. ಎನ್. ಶ್ರೀನಿವಾಸಯ್ಯನವರ ಮೊಮ್ಮಗ) |

## ಕನಕಾಭಿಷೇಕ:

ತಾ|| 07.05.2008ರಂದು **"ಮಾತೃಶ್ರೀ ಜಯಮ್ಮ"** (ದಿ|| ಆರ್. ಎಸ್. ವಿಶ್ವೇಶ್ವರ ಅವಧಾನಿ ಅವರ ಪತ್ನಿ) ಅವರಿಗೆ ಅವರ ಪ್ರಪೌತ್ರನಾದ **"ಚಿ|| ಅನಿರುದ್ಧ"**(ಶ್ರೀಮತಿ ಆರತಿ ಮತ್ತು ಶ್ರೀ ಶರತ್ ಮಂಜುನಾಥ್ ಅವರ ಪುತ್ರ) ನಿಂದ "ಕನಕಾಭಿಷೇಕ ಮಹೋತ್ಸವವು" ವಿಜೃಂಭಣೆಯಿಂದ ಬೆಂಗಳೂರಿನಲ್ಲಿ ನೆರವೇರಿತು.

## ಏಪ್ರಿಲ್ ತಿಂಗಳಲ್ಲಿ ಸಂಘಕ್ಕೆ ಬಂದ ಕೊಡುಗೆಗಳು

## ಸಭಾ ತಾಂಬೂಲಗಳು:

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಆರ್. ಶ್ರೀನಿವಾಸ್ | ಬೆಂಗಳೂರು | 8761 | 501.00 (ಗೃಹಪ್ರವೇಶ - 11.02.08) |
| ಹೆಚ್. ಎಂ. ಅವಿನಾಶ್ | ಬೆಂಗಳೂರು | 8762 | 500.00 (ಗೃಹಪ್ರವೇಶ) |
| ಬಿ. ಎಸ್. ರಾಮಸ್ವಾಮಿ | ನವದೆಹಲಿ | 8763 | 500.00 (ಗೃಹಪ್ರವೇಶ - 10.03.08) |
| ಜ|| ಆರ್. ಜಿ. ವೈದ್ಯನಾಥ (ರಿ.) | ಬೆಂಗಳೂರು | 8766 | 500.00 (ಗೃಹಪ್ರವೇಶ - 10.03.08) |
| ಆರ್. ರಾಮಚಂದ್ರನ್ (ದಿ|| ಆರ್.ಎಸ್.ರಂಗಪ್ಪನವರ ಪುತ್ರ) | ಚೆನ್ನೈ | 8769 | 101.00 (ಮಗಳ ಮದುವೆ - 11.04.08) |





| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಬಿ. ಎಸ್. ರವಿಶಂಕರ್ | ಮುಂಬಯಿ | 8772 | 500.00 (ಮಗನ ಉಪನಯನ) |
| ಹೆಚ್.ಎಸ್.ಗುರುನಾಥ್ | ಬೆಂಗಳೂರು | 8774 | 101.00 (ಗೃಹಪ್ರವೇಶ) |
| ಬಿ.ಆರ್. ರಮೇಶ್ | ಯುಎಸ್ಎ | 8775 | 2000.00 (ಗೃಹಪ್ರವೇಶ) |
| ಬಿ. ಕೆ. ರಂಗನಾಥ್ | ಮೈಸೂರು | 8776 | 502.00 (ಮಗನ ಉಪನಯನ) |
| ಕೆ.ಎನ್.ಕೇಶವಮೂರ್ತಿ | ಕಣಗಾಲ್ | 8777 | 251.00 (ಮಗನ ಉಪನಯನ) |
| ಆರ್.ಎಸ್.ಸುರೇಶ್‌ಕುಮಾರ್ | ಬೆಂಗಳೂರು | 8778 | 102.00 (ಮಗಳ ಮದುವೆ) |
| ನರಸಿಂಹಶರ್ಮ | ಮುಂಬಯಿ | 8779 | 1000.00 (ಮಗನ ಮದುವೆ) |
| ಸಿ. ಕೆ. ನಾಗೇಂದ್ರ | ಮೈಸೂರು | 8643 | 100.00 (ಮಗನ ಉಪನಯನ - 10.04.08) |
| ಹೆಚ್.ಎಸ್. ಮಂಜುನಾಥ್ | ಮೈಸೂರು | 8650 | 51.00 (ಮಗನ ಉಪನಯನ - 10.04.08) |

## ವಾರ್ತಾ ಜಾಹೀರಾತು / ಫಂಡ್ :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಲೋಕಸೇವಾ ಪ್ರತಿಷ್ಠಾನ | ಬೆಂಗಳೂರು | 8760 | 100.00 |
| ಶಕುಂತಲಾ. ಎ | ಹಾರೋಹಳ್ಳಿ | 8768 | 1000.00 |

## ಅಶಕ್ತ ಮಾಸಾಶನ ನಿಧಿ :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಎಸ್.ವಿ.ಶ್ರೀನಿವಾಸಯ್ಯ | ಬೆಂಗಳೂರು | 8770 | 1500.00 |

## ವಿದ್ಯಾರ್ಥಿ ವೇತನ ನಿಧಿ :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಲೀಲಾ ಶ್ರೀಕಂಠಯ್ಯ | ಬೆಂಗಳೂರು | 8764 | 5,000.00 |
| | (ಪತಿ ಬಿ.ಎಸ್.ಶ್ರೀಕಂಠಯ್ಯನವರ ನೆನಪಿನಲ್ಲಿ) | | |
| ಬಿ. ಕೆ. ಗೋವಿಂದರಾಜು | ಬೆಂಗಳೂರು | 8767 | 200.00 |
| | (ಬೆಟ್ಟದಪುರದ ಓಣಿ ಕಾವೇರಜ್ಜಿನೆನಪು) | | |
| ಎಸ್.ವಿ. ಶ್ರೀನಿವಾಸಯ್ಯ | ಬೆಂಗಳೂರು | 8771 | 1500.00 |

## ಹಾಸ್ಟೆಲ್ ಅನ್ನದಾನ ನಿಧಿಗೆ / ಸೇವೆಗೆ ಬಂದ ಕೊಡುಗೆಗಳು :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಹೆಚ್.ವಿ.ಮಾಯಾ | ಬೆಂಗಳೂರು | 8765 | 6000.00 |
| ಹೆಚ್.ಎಸ್.ರಾಘವನ್ | ಮೈಸೂರು | 8649 | 400.00 |
| | | | (ಅಜ್ಜನ ನೆನಪು) |

## ವೃದ್ಧಾಶ್ರಮ ಫಂಡ್ :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಆರ್.ಕೆ. ಶ್ರೀನಿವಾಸಮೂರ್ತಿ | ಬೆಂಗಳೂರು | 8773 | 10000.00 |

## ಏಪ್ರಿಲ್ ತಿಂಗಳಲ್ಲಿ ನಡೆದ ಹಾಸ್ಟೆಲ್ ಅನ್ನದಾನ ಸೇವಾ :

| ತಾರೀಖು | ಹೆಸರು | ಜ್ಞಾಪಕಾರ್ಥ |
|---|---|---|
| 01.04.08 ಬೆಂಗಳೂರು | ವಿಂಗ್ ಕಮಾಂಡರ್ ಬಿ. ವಿ. ಆರ್. ರಾವ್ | ತಾಯಿ ಲಕ್ಷಮ್ಮ |
| 01.04.08 ಬೆಂಗಳೂರು | ಪಿ ಎನ್ ಜಯರಾಮ್, ಪಿ ಎನ್ ರವಿಶಂಕರ್, ರಾಧಾ ಜೆ. ನಂದಾ ಎಸ್. | ಚಿಕ್ಕಪ್ಪ ಪಿ ಜಿ ಶ್ರೀನಿವಾಸಮೂರ್ತಿ |
| 02.04.08 ಬೆಂಗಳೂರು | ಆರ್.ಕೆ. ಚಂದ್ರಹಾಸ | ತಂದೆ ಕೃಷ್ಣಪ್ಪ |





| ತಾರೀಖು | ಹೆಸರು | ಜ್ಞಾಪಕಾರ್ಥ |
|---|---|---|
| 03.04.08 ಬೆಂಗಳೂರು | ಡಾ॥ ವಿನೋದ ಎನ್. ಮೂರ್ತಿ | ತಮ್ಮದೇ ಹುಟ್ಟುಹಬ್ಬ |
| 03.04.08 ಬೆಂಗಳೂರು | ಮಾಯಾ ಹೆಚ್.ವಿ. | |
| 05.04.08 ಯುಎಸ್ಎ | ಮೋಹನ್ ವಿ. ಬಸವಾಪಟ್ಟಣ | ತಂದೆ ವೆಂಕಟರಮಣಯ್ಯ |
| 07.04.08 ಮೈಸೂರು | ಬೆಟ್ಟದಪುರ ಸಂಕೇತಿ ಮಂಗಳಕಾರ್ಯ ಸಮಿತಿ | |
| 08.04.08 ಯುಎಸ್ಎ | ವೈದೇಹಿ ಶಿವಶಂಕರ್ | ಪುತ್ರ ರಾಂ ಶಿವಶಂಕರ್ |
| 11.04.08 ಬೆಂಗಳೂರು | ಜಯಪ್ರಕಾಶ್ ಹೆಚ್.ಎಸ್. | ತಂದೆ ಸುಬ್ರಹ್ಮಣ್ಯ ಹೆಚ್.ಜೆ. |
| 13.04.08 ಬೆಂಗಳೂರು | ಪ್ರಭಾಕರ್ ಹೆಚ್.ಎಸ್. | ತಂದೆ ಸುಬ್ರಹ್ಮಣ್ಯ ಹೆಚ್.ವಿ. |
| 14.04.08 ಬೆಂಗಳೂರು | ವೆಂಕಟರಾಮಯ್ಯ ಎಂ. ಎನ್. | ತಮ್ಮ ಹುಟ್ಟುಹಬ್ಬ |
| 14.04.08 ಯುಎಸ್ಎ | ಮೋಹನ್ ವಿ. ಬಸವಾಪಟ್ಟಣ | ತಾಯಿ ಭಾಗೀರಥಮ್ಮ |
| 17.04.08 ಬೆಂಗಳೂರು | ಇಂದಿರಾ ಆರ್. ಸಿ. | ಪತಿ ಪಿ ಜಿ ಶ್ರೀನಿವಾಸಮೂರ್ತಿ |
| 20.04.08 ಬೆಂಗಳೂರು | ರಾಮಸ್ವಾಮಿ ಬಿ. ಟಿ. | ತಮ್ಮಯ್ಯಾವಧಾನಿ ಮತ್ತು ಅಮ್ಮಯ್ಯಮ್ಮ |
| 20.04.08 ಬೆಂಗಳೂರು | ಕಮಲ ಪರಶುರಾಮ ರಾವ್ | ಪತಿ ಪರಶುರಾಮರಾವ್ |

| ತಾರೀಖು | ಹೆಸರು | ಜ್ಞಾಪಕಾರ್ಥ |
|---|---|---|
| 20.04.08<br>ಮೈಸೂರು | ಶ್ರೀಕಂಠ ಆರ್. ಸಿ. | ತಾಯಿ ಅಚ್ಚಮ್ಮ |
| 20.04.08<br>ಬೆಂಗಳೂರು | ಹೆಚ್.ಎಸ್. ಪುರುಷೋತ್ತಮ್ | ತಂದೆ ಕೋಳೂರು ಸುಬ್ಬರಾವ್ |
| 20.04.08<br>ಬೆಂಗಳೂರು | ಶಾಂತಲಕ್ಷ್ಮೀ ಬಿ. ಎನ್. | ಪತಿ ಡಾ|| ಮೋಹನ್ ರಾಂ |
| 22.04.08<br>ಬೆಂಗಳೂರು | ಮಾಯಾ ಹೆಚ್.ವಿ. | |
| 23.04.08<br>ಬಾಂಬೆ | ಆನಂದ್ ಆರ್. ವಿ. | |
| 25.04.08<br>ಚೆನ್ನೈ | ಕೃಷ್ಣಮೂರ್ತಿ ಆರ್. ಎನ್. | ಪುತ್ರಿ ಸ್ಮೃತಿಯ ಹುಟ್ಟುಹಬ್ಬ |
| 26.04.08<br>ಬೆಂಗಳೂರು | ಲೀಲಾ ಶ್ರೀಕಂಠಯ್ಯ | ಪತಿ ಶ್ರೀಕಂಠಯ್ಯ |
| 27.04.08<br>ಬೆಂಗಳೂರು | ಚಂದ್ರಶೇಖರ್ ಎಸ್. ಆರ್. | ತಂದೆ ಎಸ್. ರಾಜಾರಾಮ ರಾವ್ |
| 28.04.08<br>ಬೆಂಗಳೂರು | ಉಮಾ ನಟರಾಜ್ ಹೆಚ್.ಎಸ್. | ತಾಯಿ ಲಕ್ಷಮ್ಮ ಶ್ರೀನಿವಾಸಯ್ಯ |
| 29.04.08<br>ಬೆಂಗಳೂರು | ಕೃಷ್ಣಪ್ರಸಾದ್ ಹೆಚ್.ಎಸ್. | ತಂದೆ ಹೆಚ್. ಪಿ. ಶ್ರೀನಿವಾಸಯ್ಯ |
| 29.04.08<br>ಬೆಂಗಳೂರು | ಮೀರಾ, ಎಸ್.ಕೆ.ಚಂದ್ರಶೇಖರ್ ಗೀತಾ ಸಾಲಿಗ್ರಾಮ್ | ಆರ್.ಕೆ.ವೆಂಕಟರಾಮಾ ಶಾಸ್ತ್ರಿ (ಮಾತಾಮಹ) |





# ಆಶೀರ್ವಾದದ ಬಲ

ಆಶೀರ್ವಾದದ ಬಲ ದೊಡ್ಡದೋ ಪ್ರತಿಜ್ಞೆಯ ಬಲ ದೊಡ್ಡದೋ ಎಂದರೆ ನಿಸ್ಸಂದೇಹವಾಗಿ ಆಶೀರ್ವಾದದ ಬಲವೇ ದೊಡ್ಡದು. ಮಹಾಭಾರತದ ಕಾಲದಲ್ಲಿ ಒಮ್ಮೆ ಭೀಷ್ಮರು ಪಾಂಡವರನ್ನೆಲ್ಲ ಸಂಹಾರ ಮಾಡುವ ಪ್ರತಿಜ್ಞೆ ಮಾಡಿದರು. ಭೀಷ್ಮ ಪ್ರತಿಜ್ಞೆ ಎಂದರೆ ಎಂತಹವರೂ ಭೀತಿ ಪಡುತ್ತಿದ್ದರು. ಕಾರಣ ಅದು ಸುಳ್ಳಾಗುತ್ತಿರಲಿಲ್ಲ.

ಈ ಪ್ರತಿಜ್ಞೆಯ ಬಗ್ಗೆ ತಿಳಿದ ಪಾಂಡವರು ಚಿಂತಾಗ್ರಸ್ತರಾದರು. ಆದರೆ ದ್ರೌಪದಿ ಮಾತ್ರ ಕಂಗೆಡಲಿಲ್ಲ. ಈ ವಿಷಯವನ್ನು ಶ್ರೀಕೃಷ್ಣನಿಗೂ ತಿಳಿಸೋಣ ಎಂದಳು. ಅದರಂತೆ ಅವರೆಲ್ಲರೂ ಶ್ರೀಕೃಷ್ಣನ ಬಳಿಗೆ ಬಂದರು. ಪಾಂಡವರ ಮಾತುಗಳನ್ನು ಆಲಿಸಿದ ಶ್ರೀಕೃಷ್ಣ ಪರಮಾತ್ಮನು 'ಭೀಷ್ಮರ ಪ್ರತಿಜ್ಞೆ ಸುಳ್ಳಾಗಲು ಹೇಗೆ ಸಾಧ್ಯ ? ಇರಲಿ. ಪ್ರಯತ್ನ ಮಾಡಿ ನೋಡೋಣ' ಎಂದನು. ದ್ರೌಪದಿಯನ್ನು ಸನಿಹಕ್ಕೆ ಕರೆದು 'ನೀನು ರಾತ್ರಿಯ ಸಮಯದಲ್ಲಿ ಭೀಷ್ಮಾಚಾರ್ಯರ ಆಶ್ರಮಕ್ಕೆ ಹೋಗು. ಅಲ್ಲಿ ಸನ್ಯಾಸಿಗಳಿಗೆ ಹಾಗೂ ಸ್ತ್ರೀಯರಿಗೆ ಯಾವುದೇ ನಿರ್ಬಂಧವಿಲ್ಲ. ನಾನೂ ನಿನ್ನೊಡನೆ ಬರುತ್ತೇನೆ. ಆದರೆ ಸ್ವಲ್ಪ ಹಿಂದಿರುತ್ತೇನೆ' ಎಂದನು. ಅವಳು ಇದಕ್ಕೆ ಒಪ್ಪಿದಳು. ರಾತ್ರಿ ಸಮಯ ಶ್ರೀಕೃಷ್ಣನು ದ್ರೌಪದಿಯನ್ನು ಹಿಂಬಾಲಿಸಿ ಭೀಷ್ಮರ ಆಶ್ರಮದವರೆಗೆ ತೆರಳಿದನು. ಒಳ ಪ್ರವೇಶಿಸುವ ಮುನ್ನ ಮುಂದೇನು ಮಾಡಬೇಕು ಎಂದು ಶ್ರೀಕೃಷ್ಣನನ್ನು ಅವಳು ಪ್ರಶ್ನಿಸಿದಳು. 'ನೀನು ಬಳೆಗಳನ್ನು ಸದ್ದು ಮಾಡುತ್ತ ಭೀಷ್ಮರಿಗೆ ನಮಸ್ಕರಿಸು. ಅವರು ಆಶೀರ್ವದಿಸುತ್ತಾರೆ' ಎಂದು ಪರಮಾತ್ಮನು ಸಲಹೆಯನ್ನಿತ್ತ. ದ್ರೌಪದಿಯು ಅದೇ ರೀತಿ ನಮಸ್ಕರಿಸಿದಳು. ಭೀಷ್ಮರು 'ಅಖಂಡ ಸೌಭಾಗ್ಯವತೀಭವ' ಎಂದು ಅರೆ ನಿದ್ರಾವಸ್ಥೆಯಲ್ಲಿ ಆಶೀರ್ವದಿಸಿದರು. ಬಂದವರು ಯಾರಿರಬಹುದೆಂದು ಅನಿಸುತ್ತಿದ್ದಂತೆಯೇ ಕಣ್ಣು ತೆರೆದು ನೋಡಿದರು. ದ್ರೌಪದಿಯು ನಸು ನಗುತ್ತಾ ನಿಂತಿದ್ದಾಳೆ. ಆ ನಗುವಿನಲ್ಲಿ ಗೆಲುವಿನ ಛಾಯೆ ಇತ್ತು. ಭೀಷ್ಮರಿಗೆ ತಮ್ಮ ಪ್ರತಿಜ್ಞೆಯ ನೆನಪಾಯಿತು. ಆದರೇನು ಫಲ ? ತಮ್ಮ ಪ್ರತಿಜ್ಞೆಯನ್ನು ತಾವೇ ಭಂಗಗೊಳಿಸಿಕೊಂಡಿದ್ದರು. 'ದ್ರೌಪದಿ, ಇದು ನಿನ್ನ ಬುದ್ಧಿಯ ಕಾರ್ಯವಲ್ಲ. ನಿನ್ನ ಜೊತೆ ಯಾರು ಬಂದಿದ್ದಾರೆ ?' ಎಂದು ಭೀಷ್ಮರು ಪ್ರಶ್ನಿಸಿದರು. 'ನನ್ನ ಜೊತೆ ಒಬ್ಬ ವ್ಯಕ್ತಿ ಬಂದಿದ್ದಾನೆ' ಎಂದು ಮಾತ್ರ ದ್ರೌಪದಿ ಹೇಳಿದಳು. ಭೀಷ್ಮರಿಗೆ ಏನೋ ಹೊಳೆದಂತಾಗಿ ತಟ್ಟನೆ ಹೊರಗೆ ಬಂದು ನೋಡಿದರು. ಅಲ್ಲಿ ಶ್ರೀಕೃಷ್ಣನು ಮುಗುಳ್ನಗುತ್ತಾ ನಿಂತಿದ್ದನು. ಭೀಷ್ಮರು ಆಶೀರ್ವದಿಸಿದ್ದರಿಂದಾಗಿ ದ್ರೌಪದಿಯ ಐವರು ಗಂಡಂದಿರಾದ ಪಾಂಡವರು ಪ್ರಾಣಾಪಾಯದಿಂದ ಪಾರಾದರು. ಇದಲ್ಲವೆ ಆಶೀರ್ವಾದದ ಬಲ.

- ಸಂಗ್ರಹ

# ಯಜ್ಞೋಪವೀತ ಧಾರಣೆ

ಷಟ್ಕರ್ಮಗಳಲ್ಲಿ ಮೊದಲನೆಯದೇ ಯಜನ – ಅಂದರೆ ಯಜ್ಞ ಮಾಡುವುದು. ಯಜ್ಞ ಮಾಡುವುದಕ್ಕೆ ವಟುವಿಗೆ ಸಿಗುವ ಅನುಮತಿ ಮತ್ತು ಅರ್ಹತೆಯ ಸಂಕೇತವೇ ಯಜ್ಞೋಪವೀತ. ಉಪವೀತ, ಆವೀತ ಮುಂತಾದ ಪರ್ಯಾಯ ಪದಗಳೂ ಇವೆ. 'ಯಜ್ಞ' ಎಂಬ ಪದವು 'ಜನ್ನ' ಎಂಬ ತದ್ಭವ ರೂಪದಲ್ಲಿ ಕನ್ನಡದಲ್ಲಿ ಸೇರಿದ್ದು, ಯಜ್ಞೋಪವೀತವು 'ಜನ್ನವಾರ' ಎಂಬ ರೂಪ ತಳೆದು, ಅನಂತರ ಜನಿವಾರವಾಗಿದೆ. ಹಿಂದಿಯಲ್ಲಿ ಇದಕ್ಕೆ 'ಜನೇವೂ' ಎಂಬ ರೂಪವಿರುವುದು ಗಮನಾರ್ಹ.

ವೈದಿಕ ಪದ್ಧತಿಯ ಪ್ರಕಾರ ಯಜ್ಞ ಮಾಡುವವನು ಉಪವೀತಧಾರಿಯಾಗಿರಬೇಕು. 'ಉಪವೀತ' ಎಂದರೆ, ಎಡ ಭುಜದಿಂದ ಬಲ ಸೊಂಟದ ಮೂಲಕ ತೊಡೆಯನ್ನು ಮುಟ್ಟುವಂತೆ ಹಾಕಿಕೊಳ್ಳುವ, ಹತ್ತಿಯಿಂದ ಮಾಡಿದ ದಾರ. ಇಂದಿನ ಆಚರಣೆಯ ಪ್ರಕಾರ ಉಪವೀತವು ಮೂರು ಎಳೆಗಳುಳ್ಳ ದಾರ. ಅದರ ಪುರಾತನ ಮೂಲ ಸ್ವರೂಪ ಹೇಗಿತ್ತೆಂಬುದು ಸ್ಪಷ್ಟವಿಲ್ಲ. ದೇವಾಲಯಗಳ ಮೂರ್ತಿ ಶಿಲ್ಪಗಳನ್ನು ಗಮನಿಸಿದರೆ ಅಂದಿನ ಉಪವೀತವು ಇಂದಿಗಿಂತಲೂ ದಪ್ಪವೂ ದೃಢವೂ ಆಗಿತ್ತೆಂದು ತಿಳಿಯುತ್ತದೆ. ಗಂಡಸರು ಉತ್ತರೀಯವನ್ನು ಉಪವೀತದಂತೆಯೇ ಹೊದೆಯುವುದು, ವಿವಾಹಾದಿಗಳಲ್ಲಿ ಸ್ತ್ರೀಯರಿಗೆ ಬಟ್ಟೆಯನ್ನೇ ಉಪವೀತದಂತೆ ಹಾಕುವುದು ಮುಂತಾದುವನ್ನು ಗಮನಿಸಿದರೆ ಯಜ್ಞೋಪವೀತದ ಸ್ವರೂಪ ಇಂದಿನದಕ್ಕಿಂತ ಬೇರೆಯೇ ಇದ್ದಿರಬೇಕು ಎನಿಸುತ್ತದೆ. ಒಂದೇ ವಸ್ತ್ರವನ್ನು ಉಡುವ ಮತ್ತು ಹೊದೆಯುವ ಹಾಗೆ ಭಾರತದ ಸ್ತ್ರೀಯರು ಸೀರೆ ಉಡುವಿಕೆ ಹಾಗೂ ಸೆರಗು ಹೊದೆಯುವ ಕ್ರಮವು ಜನಿವಾರದ ಕ್ರಮದಲ್ಲೇ ಇರುವುದು ಗಮನಾರ್ಹ.

ಸಂಪ್ರದಾಯವು ಯಜ್ಞೋಪವೀತಕ್ಕೆ ತುಂಬಾ ಮಹತ್ವವನ್ನು ಕೊಟ್ಟಿದೆ. ಉಪನಯನವಾದವನು ಉಪವೀತರಹಿತನಾಗಿ ಇರಕೂಡದು ಎಂಬ ನಿಯಮವಿದೆ. ಕ್ರಮಬದ್ಧವಾಗಿ ತಯಾರಿಸಿದ ದಾರಕ್ಕೆ ದೇವತೆಗಳನ್ನು ಆವಾಹಿಸುವುದು, ಬ್ರಹ್ಮಗಂಟು ಮುಂತಾದ ಕ್ರಿಯೆಗಳು ಜನಿವಾರಕ್ಕೆ ಭಾರತೀಯರು ನೀಡಿರುವ ಮಹತ್ವದ ಸುಳಿವುಗಳಾಗಿವೆ. ಉಪವೀತಧಾರಣೆಯ ಕ್ರಮವು ಸಂದರ್ಭಾನುಸಾರ ಬದಲಾಗುತ್ತದೆ. ದೇವತಾ ಸಂಬಂಧೀ ಯಜ್ಞಗಳಲ್ಲಿ ಮೇಲೆ ಹೇಳಿದಂತೆ ಎಡ ಕುತ್ತಿಗೆಯಿಂದ ಬಲ ಸೊಂಟದ ಕಡೆಗೆ ಹಾಯುವಂತೆ ಧರಿಸಬೇಕೆಂಬುದು ನಿಯಮ. ಈ ಶೈಲಿಗೆ ಸವ್ಯ ಕ್ರಮ – ಬಲಭಾಗಕ್ಕೆ ಜನಿವಾರವಿರುವುದು ಎಂದು ಹೆಸರು. ಪಿತೃಗಳಿಗೆ ಸಂಬಂಧಿಸಿದ ಶ್ರಾದ್ಧಾದಿ ಕಾರ್ಯಗಳನ್ನು ಮಾಡುವಾಗ ಬಲದಿಂದ





ಎಡಕ್ಕೆ ಹಾಯುವಂತೆ ಧರಿಸಬೇಕು. ಇದಕ್ಕೆ ಅಪಸವ್ಯ ಕ್ರಮ – ಎಡಭಾಗಕ್ಕೆ ಜನಿವಾರವಿರುವುದು – ಎಂದು ಹೆಸರು. ಋಷಿಸಂಬಂಧದ ಕಾರ್ಯಗಳಲ್ಲಿ ಹಾರದ ಹಾಗೆ ಧರಿಸಬೇಕು. ಇದಕ್ಕೆ 'ಮಾಲಾವೀತಿ ಕ್ರಮ' ಎಂದು ಹೆಸರು. ಇದಲ್ಲದೆ ಶೌಚಕ್ಕೆ ಹೋಗುವಾಗ ಉಪವೀತವನ್ನು ಕಿವಿಗೆ ಸುತ್ತುವುದು, ಮೈಥುನ ಕಾಲದಲ್ಲಿ ಮಾಲಾವೀತಿಗೆ ವಿರುದ್ಧವಾಗಿ ಬೆನ್ನಿನ ಕಡೆಗೆ ಹಾಕಿಕೊಳ್ಳುವುದು ಮುಂತಾದ ಸಂಪ್ರದಾಯವೂ ಇದೆ.

ಯಜ್ಞೋಪವೀತವನ್ನು ಧರಿಸುವಾಗ ಹೇಳುವ 'ಯಜ್ಞೋಪವೀತಂ ಪರಮಂ ಪವಿತ್ರಂ....' ಮಂತ್ರವು ''ಯಜ್ಞಗಳ ನಿಮಿತ್ತ ನಾನು ಧರಿಸುತ್ತಿರುವ ಈ ಶುಭ್ರವಾಗಿರುವ ಉಪವೀತವು ಶ್ರೇಷ್ಠ ಮತ್ತು ಪವಿತ್ರ. ಇದರಿಂದ ಆಯುಷ್ಯ ಹೆಚ್ಚಿ ಬಲ ಮತ್ತು ತೇಜಸ್ಸುಗಳು ಉಂಟಾಗುತ್ತವೆ'' ಎಂಬ ಅರ್ಥ ಹೊಂದಿದೆ. ಉಪವೀತವು ಯಾವಾಗಲೂ ಶುಭ್ರವಾಗಿರಬೇಕು. ಮಲಿನ ಅಥವಾ ಅಪವಿತ್ರವಾದರೆ ತತ್‌ಕ್ಷಣ ಹೊಸ ಉಪವೀತವನ್ನು ಸಕ್ರಮವಾಗಿ ಧರಿಸಬೇಕು ಎಂಬ ನಿಯಮವಿದೆ. ಇಷ್ಟೆಲ್ಲ ಸ್ಪಷ್ಟ ನಿರ್ದೇಶನಗಳ ಹಿನ್ನೆಲೆಯಲ್ಲಿ ದೇಹವಿಜ್ಞಾನಕ್ಕೆ ಸಂಬಂಧಿಸಿದ ಯಾವುದೋ ಬಲವಾದ ರಹಸ್ಯವಿರಲೇ ಬೇಕು.

ಇಂದೇನೋ ನಾವು 'ಜನಿವಾರವು ತಾನು ಹಾಯುವ ಸ್ಥಾನಗಳಲ್ಲಿರುವ ಮಾಂಸಖಂಡಗಳು ಮತ್ತು ಯೋಗ ಚಕ್ರ ಸ್ಥಾನಗಳ ಮೇಲೆ ಅಕ್ಯುಪ್ರೆಷರ್‌ನಂಥ ಒತ್ತಡ ಬೀರಿ ದೇಹದ ಕಾರ್ಯಶೀಲತೆಯನ್ನು ಹೆಚ್ಚಿಸುತ್ತದೆ' ಇತ್ಯಾದಿ ಹೇಳಿಕೆಯಲ್ಲೇ ತೃಪ್ತರಾಗಬೇಕಾಗಿದೆ. ವೈಜ್ಞಾನಿಕವಾಗಿ ಇದು ಭಾಗಶಃ ಸತ್ಯವಿದ್ದು, ಪೂರ್ಣ ಸತ್ಯ ಬೇರೆಯೇ ಇರಬೇಕು. ಇಂದು ಮರೆತಿರುವ ಆ ಸತ್ಯವನ್ನು ಸಂಪ್ರದಾಯಸ್ಥರು ವಿಜ್ಞಾನಿಗಳ ಸಹಕಾರದಿಂದ ಅನಾವರಣಗೊಳಿಸಿಕೊಂಡರೆ ಅದು ನಮ್ಮ ಸಂಸ್ಕೃತಿಗೆ ಕೊಡುವ ಕಾಣಿಕೆಯಾಗುತ್ತದೆ. ಅನ್ಯಥಾ ಈಗಾಗಲೇ ಹಲವರಲ್ಲಿ ಮೂಡಿರುವಂತೆ 'ಉಪವೀತಧಾರಣೆಯು ಒಂದು ಅನುಪಯುಕ್ತ ಮೂಢನಂಬಿಕೆ' ಎಂಬ ವಾದವೇ ಬಲಿತು ನಮ್ಮ ಪುರಾತನ ಸಂಸ್ಕೃತಿಯ ಒಂದು ಅರ್ಥಪೂರ್ಣ ಭಾಗವೇ ನಿರರ್ಥಕವಾಗುತ್ತದೆ.

ಸನ್ಯಾಸಾಶ್ರಮವನ್ನು ಸ್ವೀಕರಿಸುವವರು ಬ್ರಹ್ಮಚರ್ಯ ಸಾಧನೆಯಲ್ಲೂ ಯೋಗವಿದ್ಯೆಯಲ್ಲೂ ನಿಪುಣರಾಗಿದ್ದು, ಲೌಕಿಕ ಕರ್ಮಗಳಿಂದ ವಿಮುಕ್ತರಾಗಬೇಕಾಗಿರುವುದರಿಂದ ಸನ್ಯಾಸಿಗಳಿಗೆ ಯಜ್ಞೋಪವೀತದ ಅಗತ್ಯವಿಲ್ಲ. ಆದ್ದರಿಂದ ಸನ್ಯಾಸ ಸ್ವೀಕಾರದ ಸಮಯದಲ್ಲಿ ಯಜ್ಞೋಪವೀತ ಮತ್ತು ಶಿಖೆಗಳನ್ನು ತೆಗೆದುಹಾಕುತ್ತಾರೆ.

– ಸಂಗ್ರಹ

# Bangalore,Yesterday and Today

By **R. G. Subramanyam**

Whenever the melodious film songs of the 40's or 50's sung by the all time greats like Noorjehan, Kurshid, Saigal or Pankaj Mallik, waft in the air and reach my ears, nostalgia seizes me. Going down the memory lane, I start reliving those unforgettable golden days; I had had the good fortune to spend in a city like Bangalore. What a city Bangalore was then! A canopy of lush green tall trees lined on both sides of the roads, shielded the pedestrians from the sun. Such majestic trees happened to be the home for a variety of birds, which used to greet the people around with their chirpings in the mornings and evenings. There was nothing like a hot summer afternoon. It used to be a refreshing experience to have a brisk walk in Cubbon Park or Lalbagh early in the mornings, and fill the lungs with fresh and pure air. Bangalore and Mysore were the twin cities which served as models of good town planning. They caught the imagination of town planners in the country. One hardly saw electric fans/ air conditioners in private houses. Those who had them did so perhaps to flaunt their opulence. The city deservedly earned the sobriquet, garden city/air-





conditioned city. Life in the city' was most uncomplicated, easy and leisurely paced. Environmental pollution was unheard of. The city dwellers did not face the umpteen problems that the present generation faces. Income levels were generally abysmally low, but so too were the prices of all essential commodities and services. Real estate prices were dirt, cheap. One could own a mansion in a posh locality for a couple of thousands or a lakh which the present generation pays as rent. Alas, all that has inexorably changed beyond redemption. "Madness has taken over the city. Oh! this is not the Bangalore we knew. It is dead. A beautiful city has become a monstrous one". The city elders rue in utter despair. They witness before their very eyes the gradual deterioration and degradation of the quality of the city. No more, one can see the pristine glory and the green ambience that the avenue of trees lined on either side of the roads provided. Men, ungrateful as they are, felled their friends which purified the air by absorbing the carbon dioxide emissions and releasing oxygen to the atmosphere. In the process they killed also the birds that had made the trees their home. Some of the species of birds like sparrows are now extinct. The vegetables that used to be grown using organic manure

are now grown with chemical fertilizers with liberal usage of pesticides and insecticides. We unwittingly ingest into our system poison regularly. The connoisseurs of food will at once testify to the insipidity and flavorless quality of today's vegetables. Air conditioner has now become an integral part of many city houses, which together with refrigerators contribute their mite to global warming and climate change. Lack of a quick and cheap intra-city transport system has affected everybody. What with the mushrooming of all types of vehicles and the attendant traffic snarls, screeching of automobiles and chaotic traffic, commuting in the city has become nightmarish. With a steady increase in the number of high rise buildings all over the city, its sky line has changed beyond recognition. With a population of over 6 million, the city is bursting at its seams. This has brought to sharp focus the inadequacy of infrastructure facilities, obtaining in the city. Once an envy of the entire country for its cleanliness, beauty and salubrious climate, the city has now become an ugly monster, like any other industrial city. And that is the price that Bangalore has paid for the cause of "development".





## ಪ್ರತಿಭೆ



**ಕು|| ಸುರಭಿ. ಪಿ. ಎಂ.**

**10ನೇ ತರಗತಿ, ಶೇ. 92.64**

ತಂದೆ : ಶ್ರೀ ಫಲ್ಗುಣ

ತಾಯಿ : ಶ್ರೀಮತಿ ಶಾರದಾ

ಅಜ್ಜಂದಿರು : ಶ್ರೀ ಕೇಶವ ಸ್ವಾಮಿಗಳು ಮತ್ತು ಶ್ರೀ ಕೇಶವ ಮೂರ್ತಿ ಹರವೆ

ಅಜ್ಜಿಯರು : ಶ್ರೀಮತಿ ಸೀತಮ್ಮ ಮತ್ತು ಶ್ರೀಮತಿ ಸತ್ಯವತಿ

**ಕು||ಗೆ ಸಂಘದ ಅಭಿನಂದನೆಗಳು**

## ಬದಲಾದ ವಿಳಾಸಗಳ ಪಟ್ಟಿ ಲಭ್ಯ

**15.01.2008** ರವರೆಗೆ ಪರಿಷ್ಕರಿಸಿದ ಬದಲಾದ ವಿಳಾಸ ಪಟ್ಟಿ ಮುದ್ರಿಕೆಯಾಗಿ ಲಭ್ಯವಾಗಿರುತ್ತದೆ. ಇದನ್ನು ಮೈಸೂರು ಕಛೇರಿ ಮತ್ತು ಬೆಂಗಳೂರು ಕಛೇರಿಗಳಲ್ಲಿ ಪಡೆಯಬಹುದು. ಇದರ ಬೆಲೆ ರೂ. 15/- ಮಾತ್ರ. ಇಡೀ ಪುಸ್ತಕದ ಬೆಲೆ ರೂ. 50/- ಮಾತ್ರ.

## ಸಮಾಚಾರ ಸಂಗ್ರಹ

**ಪಾಪಗಳು ! (16 ಮಾರ್ಚ್ 08 : ಬಿಬಿಸಿ) ಲಂಡನ್ :** ನಮ್ಮ ಕಾಲದ ಆಧುನಿಕ ಪಾಪಗಳನ್ನು ವ್ಯಾಟಿಕನ್ ಸಿಟಿ ಪಟ್ಟಿ ಮಾಡಿದೆ. ಕ್ಲೋನಿಂಗ್ ಹಾಗೂ ಮಾನವನ ಮೇಲೆ ಸಂಶೋಧನೆಗಳ ಪ್ರಯೋಗ, ಸಾಮಾಜಿಕ ಅಸಮಾನತೆ, ಬಡತನ, ಅಸಹ್ಯ ಹುಟ್ಟಿಸುವಷ್ಟು ಶ್ರೀಮಂತಿಕೆ, ಮಾದಕ ವಸ್ತುಗಳ ಚಟ. ಈ ಹಿಂದೆ ಸೋಮಾರಿತನ – ಹೊಟ್ಟೆಬಾಕತನ – ಅಸೂಯೆ – ದುರಾಸೆ – ಭೋಗ ಲಾಲಸೆ – ಕ್ರೋಧ – ದುರಭಿಮಾನ.... ಇವುಗಳನ್ನು 7 ಪಾಪಗಳೆಂದು ಪಟ್ಟಿ ಮಾಡಿತ್ತು. ಈ ಆಧುನಿಕ ಪಾಪಗಳು ವ್ಯಕ್ತಿ ಮತ್ತು ಸಮಾಜಕ್ಕೂ ಅನ್ವಯವಾಗುತ್ತದೆ. ವ್ಯಕ್ತಿಗಳು ಪಾಪಗಳನ್ನು ಮತ್ತೆ ಮತ್ತೆ ಮಾಡದಂತೆ ಗಮನ ಹರಿಸಬೇಕೆಂದು ಅಭಿಪ್ರಾಯಪಟ್ಟಿದೆ. ಮಾನವ ಆಧುನಿಕತೆಯನ್ನು ಬಯಸಿದಷ್ಟೂ ಪಾಪಗಳ ಸಂಖ್ಯೆ ಹೆಚ್ಚುತ್ತಿದೆ ಎಂದಿದೆ.

**ಚೇತರಿಸಿಕೊಂಡ ಕಾಶ್ಮೀರ : ಒಂದುಸಲ ನೋಡು ಬಾರಾ ! (16 ಮಾರ್ಚ್ 08 : ಪಿಟಿಐ) : ಶ್ರೀನಗರ :** ಸಿನಿಮಾ ಜನರಿಗೆ ಹೇಳಿ ಮಾಡಿಸಿದ ಜಾಗವೆಂದರೆ ಕಾಶ್ಮೀರ. 28 ವರ್ಷಗಳಿಂದ ಅಲ್ಲಿ ಭಯೋತ್ಪಾದಕರ ಕಾಟದಿಂದಾಗಿ ಸಿನಿಮಾದವರು ಅಲ್ಲಿ ಕಾಲಿಟ್ಟಿಲ್ಲ. ಆದರೆ ಈಗ ಪರಿಸ್ಥಿತಿ ತುಂಬಾ ಸುಧಾರಿಸಿದೆ. ಕಾರಣ ಭಯೋತ್ಪಾದಕರಿಗೆ ಪಾಕಿಸ್ತಾನ ಬೆಂಬಲ ಕೊಡುವುದನ್ನು ನಿಲ್ಲಿಸಿಬಿಟ್ಟಿದೆ. ಏಕೆಂದರೆ ಪಾಕಿಸ್ತಾನಕ್ಕೆ ಈ ಭಯೋತ್ಪಾದಕರೇ ಪ್ರತಿದಿನ ತಲೆ ನೋವಾಗಿದ್ದಾರೆ. ಈ ಭಯೋತ್ಪಾದಕರಿಂದಾಗಿ ಪಾಕಿಸ್ತಾನದ ಲಾಹೋರ್ – ಕರಾಚಿ – ರಾವಲ್ಪಿಂಡಿ – ಪೇಷಾವರ್ – ಇಸ್ಲಾಮಾಬಾದ್‌ಗಳಲ್ಲಿ ಪ್ರತಿದಿನ ನೂರಾರು ಜನ ಸಾಯುತ್ತಿದ್ದಾರೆ. ಪರಿಸ್ಥಿತಿ ಹೀಗೇ ಮುಂದುವರಿದರೆ ಅಮೇರಿಕಾ ಹಣಕಾಸಿನ ನೆರವು ನೀಡುವುದಿಲ್ಲವೆಂದು ಹೆದರಿಸುತ್ತಿದೆ. ಭಾರತವನ್ನು ಹೆದರಿಸುತ್ತಿದ್ದ ಪಾಕಿಸ್ತಾನವನ್ನು ಅಮೇರಿಕಾ ಹೆದರಿಸುತ್ತಿದೆ! ಹಾಗಾಗಿ ಕಾಶ್ಮೀರದಲ್ಲಿ ಉಗ್ರರ ಹಾವಳಿ ಕಡಿಮೆಯಾಗುತ್ತಲಿದೆ. ಭಯಪಟ್ಟುಕೊಂಡು ಕಾಶ್ಮೀರಕ್ಕೆ ಬಂದರೂ ಸಹ ಕೆಲವೇ ಗಂಟೆಗಳಲ್ಲಿ ಮನಸ್ಸು ನಿರಾಳವಾಗುತ್ತದೆ. ಕಾಶ್ಮೀರಿಗಳು ನಡೆದುಕೊಳ್ಳುವ ರೀತಿ ನೋಡಿದರೆ ಆತಂಕವನ್ನು ದೂರ ಮಾಡುತ್ತದೆ ಎನ್ನುವ ಮಾತು ಉತ್ಪ್ರೇಕ್ಷೆಯಾದರೂ ಸತ್ಯ ! ಯಾವುದೇ ಹೋರಾಟವಾದರೂ ಸರಿ, ಕ್ರಾಂತಿಯಾದರೂ ಸರಿ ಬೇಗ ಫಲ ಸಿಗದಿದ್ದರೆ / ಹೋರಾಟದ ನಂತರವೂ ಫಲ ಗೋಚರಿಸದಿದ್ದರೆ ಆ ಹೋರಾಟವೂ ದುರ್ಬಲಗೊಳ್ಳುತ್ತದೆ. ಪ್ರತ್ಯೇಕತಾ ವಾದದಿಂದ ಏನೂ ಪ್ರಯೋಜನವಿಲ್ಲವೆಂದು ಕಾಶ್ಮೀರಿಗಳಿಗೆ ಗೊತ್ತಾಗಿದೆ. ಆದ್ದರಿಂದಲೇ ಅವರು ಉಗ್ರರಿಗೆ ನೆರವು





ನೀಡಲು ಹೋಗುತ್ತಿಲ್ಲ. ಈಗ ಕಾಶ್ಮೀರದಲ್ಲಿ ಇಂತಹ ಪರಿಸ್ಥಿತಿ ಕಾಣುತ್ತಿದೆ. ಕಾಶ್ಮೀರದ ಚಳಿಗಿಂತ ಉಗ್ರರ ಕಲ್ಪನೆಯೇ ಭಯಂಕರ ! ಈ 28 ವರ್ಷಗಳ ಶೂನ್ಯವನ್ನು ಈಗಲಾದರೂ ತುಂಬಿಕೊಳ್ಳಬೇಕು ಎಂದು ಹೇಳಿದರು. ಕಾಶ್ಮೀರದ ಮುಖ್ಯಮಂತ್ರಿ ಗುಲಾಂ ನಬಿ ಆಜಾದ್ ಈ ಶೂನ್ಯ ಕಾಲವನ್ನು ಅವರು "Mental break" ಎಂದರು. ಇಂತಹ ಪರಿಸ್ಥಿತಿಯನ್ನು ತರಲು ಅವರು ಶ್ರಮಪಟ್ಟಿದ್ದಾರೆ. ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ, ಸರ್ವ ಶಿಕ್ಷಾ ಅಭಿಯಾನ್, ಗ್ರಾಮೀಣ ಆರೋಗ್ಯ ಕಾರ್ಯಕ್ರಮಗಳು ಜನರನ್ನು ತಲುಪಿದೆ. ಸುಟ್ಟುಹೋಗಿದ್ದ ಶಾಲೆಗಳನ್ನು ಮತ್ತೆ ಕಟ್ಟಲಾಗಿದೆ. ಭಯಪಟ್ಟಿರುವ ಶಾಲಾ ಮಕ್ಕಳು ಸರ್ಕಾರದ ಭರವಸೆಯನ್ನು ನಂಬಿ ಶಾಲೆಗಳಿಗೆ ಬರುತ್ತಿದ್ದಾರೆ. 1ನೇ ಕ್ಲಾಸ್‌ನಿಂದಲೇ ಇಂಗ್ಲೀಷ್ ಕಲಿಸುವ ವ್ಯವಸ್ಥೆಯನ್ನು ಮಾಡಲಾಗಿದೆ. ಈಗ ಕಾಶ್ಮೀರಕ್ಕೆ ಹೋಗಿಬರಲು ಕಾಲ ಕೂಡಿ ಬಂದಿದೆ. ಲಡಾಕ್ – ಗುಲ್ ಮಾರ್ಗ್ – ಸೋನಾ ಮಾರ್ಗ್ ..... ಹಾಗೆಯೇ ವೈಷ್ಣೋದೇವಿ – ಅಮರ್‌ನಾಥ್ – ರಘುನಾಥ ದೇವಾಲಯಗಳಿಗೂ ಹೋಗಿಬರಬಹುದು. ಕಳೆದ ವರ್ಷ ಕಾಶ್ಮೀರಕ್ಕೆ 75 ಲಕ್ಷ ಜನ ಬಂದಿದ್ದಾರೆ. 2400 ರೂಪಾಯಿ ಕೊಟ್ಟರೆ ಹೆಲಿಕಾಪ್ಟರ್‌ನಲ್ಲಿ ದೇವಸ್ಥಾನಗಳಿಗೆ ಹೋಗಿಬರಬಹುದು. ಕಾಶ್ಮೀರದ ಪ್ರವಾಸವನ್ನು 3 ರೀತಿಯಲ್ಲಿ ವಿಂಗಡಿಸಬಹುದಾಗಿದೆ. ಮಾರ್ಚ್–ಮೇ ಅವಧಿ, ಜೂನ್–ಆಗಸ್ಟ್ ಅವಧಿ, ಡಿಸೆಂಬರ್–ಮಾರ್ಚ್ ಅವಧಿ. ಇವುಗಳಲ್ಲಿ ಮಾರ್ಚ್–ಮೇ ಅವಧಿಯೇ ಹೆಚ್ಚು ಸುಖಕರ. $6^0$ ಸೆ.ನಿಂದ $23^0$ ಸೆ. ಉಷ್ಣಾಂಶವಿರುತ್ತದೆ. $35^0$ ಸೆ. ತಲುಪಿದಾಗ ಮಳೆ ಬರುವುದು ಇಲ್ಲಿನ ವಿಶೇಷ. ಚಳಿಗಾಲದಲ್ಲಿ ಎಲ್ಲಿ ನೋಡಿದರೂ ಹಿಮದ ರಾಶಿ. ಪರ್ವತಗಳು ಬೆಳ್ಳಿಯ ಪರ್ವತಗಳಂತೆ ಹೊಳೆಯುತ್ತವೆ. ಇಲ್ಲಿನ ಪ್ರವಾಸಿಗಳು 80% ರಷ್ಟು ಉತ್ತರ ಭಾರತೀಯರು. 20% ವಿದೇಶೀಯರು. ದಕ್ಷಿಣ ಭಾರತದವರಿಗೆ ಪ್ರಾಣಭಯ ಇನ್ನೂ ಹೋಗಿಲ್ಲ ಎಂದರು ಗುಲಾಂ ನಬಿ ಆಜಾದ್. (www.jktourism.org)

**ಅತ್ತೆ ಆಸ್ತಿಯಲ್ಲಿ ಹಕ್ಕಿಲ್ಲ! (17 ಮಾರ್ಚ್ 08 : ಪಿಟಿಐ) ನವದೆಹಲಿ :** ಮಹಿಳೆ ತನ್ನ ಪತಿಯ ತಾಯಿಯಿಂದ ಜೀವನಾಂಶ ಕೋರುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಅವಳು – ಅವಳ ಗಂಡ ಕೆಲವು ಅಪೂರ್ವ ಸನ್ನಿವೇಶಗಳಲ್ಲಿ ಅವಳ ಮಾವನಿಂದ ಅವಳು ಜೀವನಾಂಶ ಕೋರಬಹುದೇ ಹೊರತು ಅತ್ತೆಯಿಂದ ಅಲ್ಲ ಎಂದು ಹೇಳಿದೆ. ಅತ್ತೆಯ ಹೆಸರಿನಲ್ಲಿರುವ ಆಸ್ತಿಯ ಮೇಲಿನ ಹಕ್ಕನ್ನು ಗಂಡನು ಬದುಕಿರುವಾಗಲೂ ಸಹ ಪ್ರತಿಪಾದಿಸುವಂತಿಲ್ಲ ಎಂದು ಸ್ಪಷ್ಟಪಡಿಸಿದೆ.

**ರೈಲ್ವೆ ಸ್ಟೇಷನ್ - ಸಿನಿಮಾ ಥಿಯೇಟರ್ (22 ಮಾರ್ಚ್ 08 : ಯುಎನ್ನೈ) : ನವದೆಹಲಿ :** ಇನ್ನು ಮುಂದೆ ರೈಲ್ವೆ ನಿಲ್ದಾಣಗಳಲ್ಲಿ ಸಿನಿಮಾ ಥಿಯೇಟರ್ಸ್ ನಿರ್ಮಾಣ ಮಾಡಲು ರೈಲ್ವೆ ಇಲಾಖೆ ಇಷ್ಟಪಟ್ಟಿದೆ. ಇದರೊಂದಿಗೆ ರೈಲ್ವೆ ಇಲಾಖೆ ಸಾರ್ವಜನಿಕ ಖಾಸಗಿ ಪಾಲುದಾರಿಕೆಯನ್ನು ಮನರಂಜನೆ ಕ್ಷೇತ್ರಕ್ಕೆ ವಿಸ್ತರಿಸಿದೆ. ಮಹಾನಗರಗಳಲ್ಲಿರುವ ಅನೇಕ ಸ್ಟೇಷನ್ಸ್‌ನಲ್ಲಿ 1 ಡಜನ್ ಸಿನಿಮಾ ಹಾಲ್‌ಗಳನ್ನು ನಿರ್ಮಿಸಲು ಇಲಾಖೆ ಯೋಜನೆಯನ್ನು ಹಾಕಿಕೊಂಡಿದೆ. ಪ್ರಮುಖ ಜಾಗವನ್ನು ಗರಿಷ್ಠ ಪ್ರಮಾಣದಲ್ಲಿ ಉಪಯೋಗಿಸಿಕೊಳ್ಳುವುದು ಇಲಾಖೆಯ ಉದ್ದೇಶವಾಗಿದೆ. ಇದರ ಜೊತೆಗೆ ಆಹಾರ ಮಳಿಗೆಗಳು, ಉದ್ಯಾನಗಳು, ಹೋಟೆಲ್, ಲಾಂಡ್ರಿ, 40 ಫುಡ್ ಪ್ಲಾಜಾಗಳು, ಪಾಕಶಾಲೆಗಳು ...... ಹೀಗೆ ಅನೇಕ ಸೌಕರ್ಯಗಳನ್ನು ಪ್ರಯಾಣಿಕರಿಗೆ ಇಲಾಖೆಯು ಮಾಡಿಕೊಡಲಿದೆ. ಇಂತಹ ಯೋಜನೆಯಲ್ಲಿ ಫ್ಯೂಚರ್ ಗ್ರೂಪ್, ಆರ್‌ಪಿಜಿ, ಹಲ್ದೀರಾಂ, ರಿಲೆಯನ್ಸ್ ರೀಟೇಲ್‌ನಂತಹ ಹೆಸರಾಂತ ಕಂಪನಿಗಳು ಪಾಲ್ಗೊಳ್ಳು ಇಷ್ಟಪಟ್ಟಿದೆ. ಜೈಪುರ - ಕೋಲ್ಕತ್ತಾ - ಪಾಟ್ನಾ - ಚಂಡೀಗಡ್ - ಇಂದೋರ್‌ಗಳಲ್ಲಿ 500 ಎಕರೆ ಪ್ರದೇಶಗಳಲ್ಲಿ ವಾಣಿಜ್ಯದ ಉಪಯೋಗಕ್ಕಾಗಿ ಮೀಸಲಿಡಲು ತೀರ್ಮಾನಿಸಲಾಗಿದೆ.

**ಬರಲಿದೆ ಐಟಿ ಟೌನ್‌ಷಿಪ್ ! (22 ಮಾರ್ಚ್ 08:ಯುಎನ್ನೈ) ಹೈದರಾಬಾದ್ :** ಈಗ ಕೊಟ್ಟಿರುವ (ಐಟಿ-ಬಿಟಿಗಳಿಗೆ) ಸೌಲಭ್ಯಗಳು ಸಾಕಾಗುತ್ತಿಲ್ಲ! ಬೃಹತ್ ಪ್ರಮಾಣದಲ್ಲಿ ವಿಸ್ತಾರಗೊಳ್ಳಬೇಕಾದರೆ ಐಟಿ-ಬಿಟಿಗಳಿಗೇ ಪ್ರತ್ಯೇಕ ಟೌನ್‌ಷಿಪ್ ನಿರ್ಮಾಣ ಮಾಡಬೇಕಾದದ್ದು ಅನಿವಾರ್ಯ ! ಇದಕ್ಕಾಗಿ 40 ಚ.ಕಿ.ಮೀ. ವ್ಯಾಪ್ತಿಯಲ್ಲಿ ಟೌನ್‌ಷಿಪ್‌ಗಾಗಿ ಗುರುತಿಸಲಾಗಿದೆ. ಇದರ ಜೊತೆಗೆ ಐಐಟಿಯೂ ಸಹ ಸೇರಿರುತ್ತದೆ ಎಂದು ತೀರ್ಮಾನಿಸಲಾಗಿದೆ. ಹಾಗೆಯೇ ಐಟಿ-ಬಿಟಿ-ಬಿಪಿಒ ಕಂಪನಿಗಳೂ ಇರುತ್ತವೆ. ಅಷ್ಟೇ ಅಲ್ಲದೆ ಹಾರ್ಡ್‌ವೇರ್ - ಪ್ರೊಡಕ್ಷನ್ ಯೂನಿಟ್ ಸ್ಥಾಪನೆಗೂ ಅವಕಾಶ ಮಾಡಿಕೊಡಲಾಗುವುದು. ಐಐಟಿಗಳನ್ನು ಸಾರ್ವಜನಿಕ ಖಾಸಗಿ ಪಾಲುಗಾರಿಕೆಯಲ್ಲಿ ಹೆಚ್‌ಆರ್‌ಡಿ ಇಲಾಖೆಯ ಸೂಚನೆಗಳ ಮೇರೆಗೆ ಸ್ಥಾಪಿಸಲಾಗುವುದು. ಐಟಿ ಕ್ಷೇತ್ರದ ವಿಶೇಷ ಹಣಕಾಸಿನ ವಲಯದ ಬೆಳವಣಿಗೆಗೆ ಸರ್ಕಾರವೇ ಬಯಸಿದೆ. ಐಐಟಿಗಳಲ್ಲಿ ಒಂದು/ಹೆಚ್ಚು ವಿಶೇಷ ಹಣಕಾಸಿನ ವಲಯಗಳು, ಇಂಡಸ್ಟ್ರಿಯಲ್ ಪಾರ್ಕ್, ಮುಕ್ತ ವ್ಯಾಪಾರ ಕೇಂದ್ರ, ಗೋಡೌನ್ ರೀಜೆನ್‌ಗಳಿರುತ್ತವೆ. ಹೊಸ ನೀತಿಯಂತೆ ವಿಮಾನ ನಿಲ್ದಾಣಗಳ ಅಭಿವೃದ್ಧಿಯಾಗಲೂ ಗಮನ ಕೊಡಲಾಗುತ್ತದೆ. ವಸತಿ ಟೌನ್‌ಷಿಪ್‌ಗಳ ಜೊತೆಗೆ





ಮನರಂಜನಾ ಸೌಲಭ್ಯಗಳನ್ನು ರಿಯಲ್ ಎಸ್ಟೇಟ್ ಉದ್ಯಮಗಳು ಅಭಿವೃದ್ಧಿಪಡಿಸಲು ಇಷ್ಟಪಟ್ಟಿದ್ದಾರೆ. ಕೇಂದ್ರ ಸರ್ಕಾರವು ರಾಷ್ಟ್ರೀಯ ಹೆದ್ದಾರಿಗೆ ಸಂಪರ್ಕ ಹೊಂದಲು ಅನುಕೂಲ ಮಾಡಿಕೊಡಲು ಒಪ್ಪಿದೆ. ರಾಜ್ಯ ಸರ್ಕಾರಗಳು ವಿದ್ಯುತ್ - ನೀರು - ಆರೋಗ್ಯ ಶಿಕ್ಷಣ - ರಸ್ತೆಗಳ ಸೌಲಭ್ಯ ನೀಡಲಿವೆ.

**ನಾಯಿಗಳಿಗೂ ಬೇಬಿ ಸಿಟ್ಟಿಂಗ್ : (24 ಮಾರ್ಚ್ 08 : ಪಿಟಿಐ) ಮಂಗಳೂರು :** ಯಾವುದಕ್ಕೂ ಸುಖ ಪಡೆಯಲು ಸಾಧ್ಯವಾಗದವರನ್ನು ನೋಡಿ ಅವರನ್ನು ''ನಾಯಿ ಪಾಡಾಗೋಯ್ತು'' ಎಂದು ಗೇಲಿ ಮಾಡುವುದುಂಟು! ಫ್ಯಾಷನ್‌ಗಾಗಿ ನಾಯಿ ಸಾಕಿದವರ ಪಾಡೇ ನಾಯಿ ಪಾಡಾಗುವುದುಂಟು. ಗಂಡ - ಹೆಂಡತಿ ಕೆಲಸಕ್ಕೆ ಹೊರಟು ಹೋದನಂತರ ಸಾಕಿರುವ ನಾಯಿಯನ್ನು ನೋಡಿಕೊಳ್ಳಲು ಡಾಗ್ ಸಿಟ್ಟಿಂಗ್ ಆರಂಭವಾಗಿದೆ. 1 ದಿನದ ಆರೈಕೆಗೆ 200 ರೂಪಾಯಿ. ಉತ್ತಮ ಜಾತಿಯ ನಾಯಿಯಾದರೆ 500 ರೂಪಾಯಿ. ನಾಯಿಗಳಿಗೆ ಊಟ - ವಾಕಿಂಗ್ - ವಾಷಿಂಗ್ - ಬ್ರೆಶ್ಶಿಂಗ್ - ನೈಲ್ ಕ್ಲಿಪ್ಪಿಂಗ್ - ಪಾಲಿಶಿಂಗ್ - ಡಾಕ್ಟರ್ ಚೆಕಪ್ ..... ಎಲ್ಲವೂ ಇದೆ. ಗಂಡ ಹೆಂಡತಿಯ ಆದಾಯದ ಆಧಾರದ ಮೇಲೆ ಭರ್ಜರಿಯಾಗಿ ಹಣ ಕೀಳುವ ದಂಧೆ ಇದು ! ನಾಯಿಯನ್ನು ಬಿಟ್ಟು ಹೋಗಲಾರದ ಅಸಹಾಯಕತೆಯನ್ನು ಕ್ಯಾಶ್ ಮಾಡಿಕೊಳ್ಳುವ ತಂತ್ರವೂ ಆಗಿದೆ. ಆದರೆ ತಲೆಹರಟೆ ನಾಯಿಗಳಿಗೆ ಪ್ರವೇಶವೇ ಇಲ್ಲ. ಪ್ರವೇಶ ಏನಿದ್ದರೂ ಮುದ್ದು / ಮೊದ್ದು ನಾಯಿಗಳಿಗೆ ಮಾತ್ರ. ನಾಯಿಗಳನ್ನು ಸಾಕುವವರು ಹಣ ಇರುವವರು ಮಾತ್ರ. ಅವರಿಂದ ಏನಾದರೂ ಒಂದು ನೆಪದಲ್ಲಿ ಹಣ ಕೀಳುವುದು ಈಗಿನ ಕಾಲದ ಫ್ಯಾಷನ್ ! ಇದಕ್ಕೆ ಯಾರ ವಿರೋಧವೂ ಇಲ್ಲ. ಒಟ್ಟಿನಲ್ಲಿ ನಾಯಿ ಚೆನ್ನಾಗಿದ್ದರೆ ಸಾಕು !

– ಬಿ.ಎಸ್. ಸತೀಶ್

## *Change of Address*

**S. R. Nagaraja**
**Prabha**
Flat No. 105A, Amarjyothy Apts., No. 85,
Kanakapura Road, 8th Block, Jayanagar,
Opp. Yediyur Lake, Bangalore - 560 082
Ph : 2676 5225

## ವರ ಬೇಕಾಗಿದೆ

### ವಧುವಿನ ವಿವರ

ಗೋತ್ರ : ಸಂಕೃತಿ

ನಕ್ಷತ್ರ : ಅನುರಾಧ

ರಾಶಿ : ವೃಶ್ಚಿಕ

ವಯಸ್ಸು : 28 ವರ್ಷ

ಎತ್ತರ : 5'4''

ವಿದ್ಯಾರ್ಹತೆ : Post Graduate in H R

ಉದ್ಯೋಗ : Consultant in SAP currently with Delloitte (U.S.A.). Relocating to Singapore

ನಿರೀಕ್ಷೆ : Suitable Match

ಸಂಪರ್ಕಿಸಿ : **022 - 30529118, 09323947436**
**080 - 23578073**





*With Best Compliments From :*

# Smt. Geetha Krishna
## Periyapatna

*Contact for SBI Life Insurance and Postal R.D. Agent*

**No. 114, Sri Ganesha Krupa, Vala Kote, Periyapatna, Mysore District - 571 107**
**Ph : 08223 - 274949, (M) : 9448602038**

ಬೆಟ್ಟದಪುರದ ದಿ|| ಶ್ರೀ ಬಿ. ಕೆ. ಸುಬ್ರಹ್ಮಣ್ಯರವರ ಧರ್ಮಪತ್ನಿ
ಶ್ರೀಮತಿ ಜಯಲಕ್ಷ್ಮಮ್ಮನವರ ಕುಟುಂಬ

### ಸಂಪರ್ಕಿಸಿ :

ವಧೂ-ವರರ ವಿವರಣೆಗಳಿಗಾಗಿ ನಮ್ಮ ಬಾಂಧವರು ಶ್ರೀಯುತ ಹೆಚ್.ವಿ. ಮುರಳೀಧರ ಅವರನ್ನು ಸಂಪರ್ಕಿಸಬಹುದು.

**(P. G. Accommodation Available)**

**ದೂ : 9242803829, 9341413319**